




ಕಥೆ




ಪ್ರಥಮ್ ಎಸ್

ಕಲೆ: ಮುರಳೀಧರ್ ರಾಥೋಡ್


# ರೂಬಿಕ್ಸ್ ಕ್ಯೂಬ್

ಆಧುನಿಕ ಆಸ್ಪತ್ರೆಯ ಸಮಾಲೋಚನಾ ಕೋಣೆಯಲ್ಲಿ ಡಾ.ರೋಹಿಣಿ ತನ್ನ ರೋಗಿಗಳ ತಪಾಸಣೆ ಮಾಡುತ್ತಿದ್ದಾಗ, ಆಕೆಯ ಮೊಬೈಲ್ ಫೋನ್ ರಿಂಗಾಯಿತು. ರೋಹಿಣಿ ಮೊಬೈಲ್ ಕೈಗೆ ತೆಗೆದುಕೊಂಡು ನೋಡಿದಳು. ಪುಟ್ಟ ಸ್ಕ್ರೀನ್‌ನಲ್ಲಿ 'RUBY' ಎಂಬ ಹೆಸರು ಮಿನುಗಿತು. ಕರೆ ಸ್ವೀಕರಿಸಿದ್ದೇ ತಡ ಅತ್ತ ಕಡೆಯಿಂದ ಮಗಳ ಧ್ವನಿ ತೇಲಿಬಂತು. 'ಅಮ್ಮಾ, ನಾನು ಇಂಡಿಯಾಗ್ ಬರ್ತಾ ಇದ್ದೀನಿ. ಮುಂದಿನ ಆಗಸ್ಟ್‌ನಲ್ಲಿ ಲಾಂಗ್ ವೀಕೆಂಡ್ ಇದೆ. ನೀನು ಫ್ರೀ ಮಾಡ್ಕೊಂಡು ನಮ್ಮ ಜೊತೆ ಮಡಿಕೇರಿಯ ರೆಸಾರ್ಟ್‌ಗೆ ಬರಬೇಕು, 'Let's spend some quality family time, and I have a surprise too!' ರೂಬಿಯ ಧ್ವನಿಯಲ್ಲಿ ಒತ್ತಾಯ ಇತ್ತು ಜೊತೆಯಲ್ಲಿ ಕುತೂಹಲವನ್ನೂ ಕೆರಳಿಸಿದ್ದಳು. ಒಂದು ವರುಷದ ನಂತರ ಮಗಳನ್ನು ಭೇಟಿಯಾಗುವುದು ಸಂತೋಷದ ವಿಷಯವೇ ಸರಿ. ಆದರೆ, ರೂಬಿ ಹೇಳಿದ 'ನಿನಗೆ ಸರ್‌ಪ್ರೈಸ್ ಇದೆ' ಎಂಬ ಮಾತು ಮನಸ್ಸಿನಲ್ಲಿ ಉಳಿಯಿತು.

ರೋಹಿಣಿ ಮಡಿಕೇರಿಯ ರೆಸಾರ್ಟ್ ತಲುಪಿದಾಗ, ಮಂಜು ಮುಸುಕಿದ ಪರ್ವತಗಳ ಸೌಂದರ್ಯ ಮನಸ್ಸನ್ನು ತುಂಬಿತು. ಜೊತೆಯಲ್ಲಿ ಇದು ಅಪರಿಚಿತ ಜಾಗವಲ್ಲ ಈ ಹಿಂದೆ ಇಲ್ಲಿಗೆ ಬಂದಿದ್ದೇನೆ ಎನ್ನುವ ಭಾವ. ರೋಹಿಣಿ ತನ್ನ ಕೊಠಡಿ ಸಂಖ್ಯೆ 9 ಅನ್ನು ಹೊಕ್ಕಾಗ ಅವಳ ಹೃದಯ ಬಡಿತ ಹೆಚ್ಚಾಯಿತು.